ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ತಟ್ಟಿಗೇರಾ ಗ್ರಾಮಸ್ಥರಲ್ಲಿ ಸಂತಸ ಮೂಡಿಸಿದ ಜಲ ಜೀವನ್ ಮಿಷನ್



ಗ್ರಾಮೀಣ ಪ್ರದೇಶಗಳಲ್ಲಿ ಬಹುಕಾಲದಿಂದ ಶುದ್ಧ ಕುಡಿಯುವ ನೀರಿನ ಕೊರತೆಯಿದ್ದು ಭಾರತದ ಗ್ರಾಮೀಣ ಭಾಗದಲ್ಲಿ ಇದೊಂದು ಜ್ವಲಂತ ಸಮಸ್ಯೆಯಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಬೇಕೆಂಬ ಮಹದುದ್ದೇಶದಿಂದ ಫ್ರಾರಂಭಗೊಂಡಿದ್ದ ಯೋಜನೆಯೇ ಜಲಜೀವನ್ ಮಿಷನ್. ಶುದ್ಧ ಸುರಕ್ಷಿತ ನೀರನ್ನು ಗ್ರಾಮೀಣ ಜನತೆಗೆ ಒದಗಿಸುವುದು ಇದರ ಜೊತೆಗೆ ನೀರಿನ ಅಲಭ್ಯತೆಯಿಂದ ಜನರು ಎದುರಿಸುತ್ತಿರುವ ಆರೋಗ್ಯ ಸಮಸ್ಯೆಗಳನ್ನು ಸುಧಾರಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯಡಿ ಲಾಭ ಪಡೆದ ಗ್ರಾಮಗಳಲ್ಲಿ ತಟ್ಟಿಗೇರಾ ಗ್ರಾಮವೂ ಒಂದಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ತಟ್ಟಿಗೇರಾ ಗ್ರಾಮ ಪಂಚಾಯತಿಯು ತಾಲೂಕು ಕೇಂದ್ರದಿಂದ 24 ಕಿ.ಮೀ ದೂರದಲ್ಲಿದೆ. ಹಳಿಯಾಳ ನಗರದಿಂದ 12 ಕಿಮೀ ದೂರದಲ್ಲಿದೆ . ತಟ್ಟಿಗೇರಿ ಗ್ರಾಮ ಪಂಚಾಯತಿಯು 94% ರಷ್ಟು ದಟ್ಟ ಅರಣ್ಯದಿಂದ ಆವೃತವಾಗಿದೆ. ಸುಮಾರು 2,718 ಜನ ಸಂಖ್ಯೆಯನ್ನು ಹೊಂದಿರುವ ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿತ್ತು.

## ಜೆಜೆಎಂ ಯೋಜನೆಯ ಅನುಷ್ಠಾನದ ಸವಾಲುಗಳು :

ತಟ್ಟಿಗೇರಾ ಗ್ರಾಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇರದ ಕಾರಣ ಕಾಲ್ನಡಿಗೆಯಲ್ಲಿ ಹೋಗಿ ದೂರದ ಗುಡ್ಡದಲ್ಲಿದ್ದ ಬಾವಿಯಿಂದ ನೀರನ್ನು ಸಂಗ್ರಹಿಸಬೇಕಿತ್ತು. ಇತ್ತೀಚಿಗೆ ಬಾವಿಯಲ್ಲೂ ಕೂಡ ನೀರು ಕಡಿಮೆಯಾಗಿದ್ದು , ಜನರು ನೀರಿಗಾಗಿ ಪರದಾಡುವ ಪರಿಸ್ಥಿತಿ ಏರ್ಪಟ್ಟಿತ್ತು.
ನೀರಿನ ಸಮಸ್ಯೆ ಪರಿಹಾರ ಕಂಡುಕೊಳ್ಳಬೇಕು ಎಂಬ ಪ್ರಯತ್ನದಲ್ಲಿದ್ದ ಜನರಿಗೆ ಜಲಜೀವನ್ ಮಿಷನ್ ಯೋಜನೆ ವಿಶ್ವಾಸ ಮೂಡಿಸಿತು. ಗ್ರಾಮ ಪಂಚಾಯಿತಿಯಿಂದ ಜಲಜೀವನ್ ಮಿಷನ್ ಕುರಿತು ಜನರಿಗೆ ಅರಿವು ಮೂಡಿಸಲು ನೀಡಿದ ಮಾಹಿತಿಯಿಂದ ಜಾಗೃತರಾದ ಗ್ರಾಮಸ್ಥರು ಯೋಜನೆ ಅನುಷ್ಠಾನದಲ್ಲಿ ಕೈಜೋಡಿಸಿದರು.

2022- 23ನೇ ಸಾಲಿನಲ್ಲಿ ಬ್ಯಾಚ್ 4 ರಲ್ಲಿ ಜಲ ಜೀವನ್ ಮಿಷನ್ ಯೋಜನೆಯ ಅಡಿಯಲ್ಲಿ 92 ಲಕ್ಷ ರೂ ವೆಚ್ಚದಲ್ಲಿ ನೀರಿನ ಟ್ಯಾಂಕ್ ಅನ್ನು ಮೇಲ್ದರ್ಜೆಗೇರಿಸಿ ಮನೆ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ನೀಡುವ ಮೂಲಕ ನೀರನ್ನು ಪ್ರತಿ ಮನೆಗೆ ಪೂರೈಸಲಾಯಿತು. ಜೊತೆಗೆ ಗ್ರಾಮದಲ್ಲಿನ ಜಾನುವಾರುಗಳಿಗೆ ನೀರು ಕುಡಿಯಲು ಅನುಕೂಲವಾಗುವಂತೆ ನೀರಿನ ಸಂಗ್ರಹಣೆಗೆ ತೊಟ್ಟಿಯನ್ನು ಕಟ್ಟಿಸಲಾಯಿತು. ಜನರಿಗೆ ಪೂರೈಕೆ ಮಾಡುವ ನೀರಿನ ಶುದ್ಧತೆಯನ್ನು ಖಾತ್ರಿಪಡಿಸಿಕೊಳ್ಳಲು ಎಫ್.ಟಿ.ಕೆ ಕಿಟ್‌ಗಳ ಮೂಲಕ ನೀರಿನ ಪರೀಕ್ಷೆ ಕಾಲಕಾಲಕ್ಕೆ ಮಾಡಿಸಲಾಗುತ್ತಿದೆ. ಈ ಭಾಗದಲ್ಲಿ ಜೆಜೆಎಂ ಯೋಜನೆ ಯಶಸ್ವಿಯಾಗಿ ಅನುಷ್ಟಾನಗೊಳಿಸುವಲ್ಲಿ ನೀರಿನ ಸಮಸ್ಯೆ ತಪ್ಪಿಸುವಲ್ಲಿ ಪಂಚಾಯಿತಿ ಅಧಿಕಾರಿಗಳು, ಚುನಾಯಿತ ಸದಸ್ಯರು, ಆಶಾ/ ಅಂಗನವಾಡಿ ಕಾರ್ಯಕರ್ತೆಯರು ಬಹುಮುಖ್ಯ ಪಾತ್ರ ವಹಿಸಿದ್ದಾರೆ.

## ಜೆಜೆಎಂ ಯೋಜನೆ ಯಶಸ್ವಿ ಅನುಷ್ಟಾನಕ್ಕೆ ಸಹಭಾಗಿತ್ವ :



ಸಮಾನ ಸಂಖ್ಯೆಯ ಮಹಿಳಾ ಮತ್ತು ಪುರುಷ ಸದಸ್ಯರನ್ನು ಒಳಗೊಂಡಿರುವ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯು ಯೋಜನೆಯನ್ನು ಸುಸ್ಥಿತಿಯಲ್ಲಿ ಕಾಪಾಡಿಕೊಳ್ಳಲು ಮತ್ತು ನೀರು ಸರಬರಾಜು ವ್ಯವಸ್ಥೆಯ ಸುಗಮ ಕಾರ್ಯಾಚರಣೆಯ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ನೀರು ಸಂಗ್ರಹ ಕಾರ್ಯಾದಲ್ಲಿ ಹೈರಾಣಾಗುತ್ತಿದ್ದ ಮಹಿಳೆಯರು ಮತ್ತು ಮಕ್ಕಳ ಬದುಕನ್ನು ಜಲ ಜೀವನ್ ಮಿಷನ್ ಸುಧಾರಿಸಿದೆ.
ಇದರಿಂದ ಗ್ರಾಮದ ಮಹಿಳೆಯರ ಜೀವನ ಸುಲಭವಾಗಿದ್ದಲ್ಲದೇ, ಇತರ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಅವರಿಗೆ ಅನುಕೂಲವಾಗಿದೆ.

**ಒಟ್ಟಾರೆಯಾಗಿ ಪ್ರತಿ ಮನೆ ಬಾಗಿಲಿಗೆ ಶುದ್ಧ , ಸುರಕ್ಷಿತ, ನೀರನ್ನು ಒದಗಿಸುವ ಮೂಲಕ ಗ್ರಾಮೀಣ ಜನರ ಜೀವನಮಟ್ಟ ಮತ್ತು ಜನರ ಆರೋಗ್ಯ ವೃದ್ಧಿಸುವಲ್ಲಿ ಜಲಜೀವನ್ ಮಿಷನ್ ಸಹಕಾರಿಯಾಗಿದೆ.**

**ಈ ಮೂಲಕ ತಟ್ಟಿಗೇರಾ ಜನರ ನೀರಿನ ಸಮಸ್ಯೆಯನ್ನು ಬಗೆಹರಿಸಿ ಮಹಿಳೆಯರ ಬದುಕಿನಲ್ಲಿ ಸಂತಸ ಮೂಡಿಸಿದೆ.**




ಮನೆ ಮನೆಗೆ ಗಂಗೆ ಜಲ ಜೀವನ್ ಮಿಷನ್ | ಜಲೋತ್ಸವ | ಸ್ವಚ್ಛ ಸಂಕೀರ್ಣ | ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

8277506000
ಏಕೀಕೃತ ಸಹಾಯವಾಣಿ